# ವಿವಿಧ ಉಪದೇಶಗಳು



❁ ಯಾರು ಹೇಳುತ್ತಾನೊ ತನಗೆ ದೊರಕದು ಅಂತ, ಆತನಿಗೆ ಎಂದಿಗೂ ದೊರಕದು. ಮುಕ್ತಾಭಿಮಾನಿ ಮುಕ್ತನೇ ಆಗುತ್ತಾನೆ; ಬದ್ಧಾಭಿಮಾನಿ ಬದ್ಧನೇ ಆಗುತ್ತಾನೆ. ಯಾರು ದೃಢ ಮನಸ್ಸಿನಿಂದ ಭಾವಿಸುತ್ತಾನೊ ತಾನು ಮುಕ್ತನಾಗಿಬಿಟ್ಟೆ ಅಂತ, ಆತ ಮುಕ್ತನೇ ಆಗಿಬಿಡುತ್ತಾನೆ. ಯಾರು ಹಗಲು ಇರುಳು ತಾನು ಬದ್ಧ, ತಾನು ಬದ್ಧ ಅಂತ ಭಾವಿಸುತ್ತಾನೊ, ಆತ ಬದ್ಧನೇ ಆಗಿಬಿಡುತ್ತಾನೆ.

❁ ಬೇಕಾದಷ್ಟು ವಿಚಾರದಲ್ಲಿ ತೊಡಗು, ‘ಅಹಂ’ ಎಂಬುದು ಹೋಗುವುದಿಲ್ಲ. ‘ಅಹಂ’ ಎಂಬುದೇ ಕುಂಭ, ಬ್ರಹ್ಮನೇ ಎಲ್ಲೆಲ್ಲೂ ನೀರೇ ನೀರಾಗಿರುವ ಸಮುದ್ರ, ಅಂತ ಇಟ್ಟುಕೊಳ್ಳಿ. ಕುಂಭದ ಒಳಗೂ ಹೊರಗೂ ನೀರು ತುಂಬಿದೆ; ಎಲ್ಲೆಲ್ಲೂ ಬರೀ ನೀರೇ ನೀರು; ಆದರೂ ಕುಂಭ ಎಂಬುದು ಮಾತ್ರ ಇದ್ದೇ ಇರುತ್ತದೆ. ಈ ಕುಂಭವೇ ಭಕ್ತನ ‘ಅಹಂ’ ಎಂಬುದರ ಸ್ವರೂಪ. ಎಲ್ಲಿಯವರೆಗೆ ಕುಂಭ ಎಂಬುದು ಇರುವುದೊ, ಅಲ್ಲಿಯವರೆಗೆ ‘ನಾನು’, ‘ನೀನು’, ಎಂಬುದು ಇದ್ದೇ ಇರುತ್ತದೆ; ‘ನೀನು ಪ್ರಭು, ನಾನು ದಾಸ; ನೀನು ಭಗವಂತ, ನಾನು ಭಕ್ತ’ ಎಂಬುವೂ ಇದ್ದೇ ಇರುತ್ತವೆ. ಬೇಕಾದಷ್ಟು ವಿಚಾರದಲ್ಲಿ ತೊಡಗು, ಇದು ಹೋಗತಕ್ಕದಲ್ಲ. ಕುಂಭವೇ ಹೋಗಿಬಿಟ್ಟಿತು ಅಂದರೆ ಆಗ ಅದು ಬೇರೆ ಸಮಾಚಾರ.

❁ ಯಾರಲ್ಲಿ ಜ್ಞಾನವಿದೆಯೊ ಆತನಲ್ಲಿ ಅಜ್ಞಾನವೂ ಇದೆ. ನೀನು ಜ್ಞಾನಾಜ್ಞಾನಗಳನ್ನು ದಾಟಿ ಹೋಗು. ಕಾಲಿಗೆ ಮುಳ್ಳು ಚುಚ್ಚಿಕೊಂಡರೆ ಹುಡುಕಿಕೊಂಡು ಹೋಗಿ ಬೇರೊಂದು ಮುಳ್ಳನ್ನು ಸಂಪಾದಿಸಿಕೊಳ್ಳಬೇಕಾಗುತ್ತದೆ. ದೊರೆತ ಮುಳ್ಳಿನಿಂದ ಕಾಲಿಗೆ ಚುಚ್ಚಿಕೊಂಡಿರೋ ಮುಳ್ಳನ್ನು ತೆಗೆದುಹಾಕಿ, ಬಳಿಕ ಎರಡು ಮುಳ್ಳನ್ನೂ ಬಿಸಾಡಬೇಕಾಗುತ್ತದೆ. ಅದಕ್ಕಾಗಿಯೇ ಅಜ್ಞಾನದ ಮುಳ್ಳನ್ನು ತೆಗೆದುಹಾಕಲೋಸುಗ ಜ್ಞಾನದ ಮುಳ್ಳನ್ನು ಸಂಪಾದಿಸಿಕೊಳ್ಳಬೇಕು. ಬಳಿಕ ಜ್ಞಾನಾಜ್ಞಾನಗಳನ್ನು ದಾಟಿಹೋಗಬೇಕು.

❁ ಜ್ಞಾನ ಅಂತಃಪುರದವರೆಗೆ ಮಾತ್ರ ಹೋಗಬಲ್ಲದು, ಆದರೆ ಭಕ್ತಿ ಅಂತಃಪುರಕ್ಕೇನೇ ಹೋಗಬಲ್ಲದು. ಶುದ್ಧಾತ್ಮ ನಿರ್ಲಿಪ್ತ. ಆತನಲ್ಲಿ ವಿದ್ಯೆ ಅವಿದ್ಯೆ ಎರಡೂ ಇವೆ. ಆದರೆ ಆತ ಮಾತ್ರ ನಿರ್ಲಿಪ್ತ. ಗಾಳಿಯಲ್ಲಿ ಒಮ್ಮೆ ಸುಗಂಧ, ಒಮ್ಮೆ ದುರ್ಗಂಧ ಎರಡೂ ಬರುತ್ತವೆ, ಆದರೆ ಅದು ಮಾತ್ರ ನಿರ್ಲಿಪ್ತ.

❁ ಭಗವಂತನ ಸಾಕ್ಷಾತ್ಕಾರಕ್ಕೋಸುಗ ಗುರುಹಿರಿಯರ ಆಜ್ಞೆಯನ್ನು ಉಲ್ಲಂಘನೆ ಮಾಡಿದರೆ ಯಾವ ಅಪರಾಧವೂ ಆಗದು. ಭರತನು ಶ್ರೀರಾಮನಿಗಾಗಿ ಕೈಕೇಯಿಯ ಆಜ್ಞೆಯನ್ನು ಮೀರಿದ. ಗೋಪಿಯರು ಶ್ರೀಕೃಷ್ಣನ ದರ್ಶನಕ್ಕಾಗಿ ತಮ್ಮ ಪತಿಗಳ ಪ್ರತಿಬಂಧಕಾಜ್ಞೆಯನ್ನು ಮೀರಿದರು. ಪ್ರಹ್ಲಾದ ಭಗವಂತನಿಗಾಗಿ ತಂದೆಯ ಆಜ್ಞೆಯನ್ನು ಮೀರಿದ. ಬಲಿಚಕ್ರವರ್ತಿ ಭಗವಂತನ ಪ್ರೀತ್ಯರ್ಥವಾಗಿ ತನ್ನ ಗುರು ಶುಕ್ರಾಚಾರ್ಯರ ಆಜ್ಞೆಯನ್ನು ಉಲ್ಲಂಘನೆ ಮಾಡಿದ. ವಿಭೀಷಣ ರಾಮನ ಅನುಗ್ರಹವನ್ನು ಪಡೆಯಲು ತನ್ನ ಹಿರಿಯ ಅಣ್ಣ ರಾವಣನ ಇಚ್ಛೆಗೆ ವ್ಯತಿರಿಕ್ತವಾಗಿ ನಡೆದುಕೊಂಡ. ಆದರೆ ನಮ್ಮ ಗುರುಹಿರಿಯರ ‘ಭಗವಂತನ ಕಡೆಗೆ ಹೋಗಬೇಡ’ ಎಂಬ ಆಜ್ಞೆಯೊಂದನ್ನು ಬಿಟ್ಟು ಉಳಿದವುಗಳನ್ನೆಲ್ಲಾ ಪಾಲಿಸಬೇಕು.

❁ ಭಗವಂತ ಅನಂತನೇ ಆಗಿರಲಿ ಅಥವಾ ಎಷ್ಟು ದೊಡ್ಡವ ಬೇಕಾದರೂ ಆಗಿರಲಿ, — ಆತ ಇಚ್ಛೆಪಟ್ಟರೆ, ಆತನ ಆಂತರ್ಯದ ಸಾರವಸ್ತು ಮಾನವನ ಮೂಲಕ ವ್ಯಕ್ತವಾಗಿರಬಲ್ಲದು ಮತ್ತು ಆಗಿಯೂ ಆಗಿದೆ.

❁ ಹಸುವಿನ ಕೊಂಬು ಮುಟ್ಟಿದರೂ ಹಸುವನ್ನು ಮುಟ್ಟಿದ ಹಾಗೆಯೆ. ಅದರ ಬಾಲ ಅದರ ಕಾಲು ಯಾವುದನ್ನು ಮುಟ್ಟಿದರೂ ಹಸುವನ್ನು ಮುಟ್ಟಿದ ಹಾಗೆಯೆ; ಆದರೆ ನಮಗೆ ಬೇಕಾಗಿರುವುದು ಹಸುವಿನ ಆಂತರ್ಯದಲ್ಲಿರುವ ಸಾರವಸ್ತು — ಹಾಲು. ಅದು ಅದರ ಕೆಚ್ಚಲಿನ ಮೂಲಕ ಹೊರಕ್ಕೆ ಬರುತ್ತದೆ. ಅವತಾರಪುರುಷನನ್ನೇ ಭಗವಂತನ ಕೆಚ್ಚಲು ಅಂತ ಹೇಳಬಹುದು. ಜನರ ಹೃದಯದಲ್ಲಿ ಪ್ರೇಮ, ಭಕ್ತಿಯನ್ನು ಉಂಟು ಮಾಡುವುದಕ್ಕಾಗಿ ಭಗವಂತನು ಮಾನವ ದೇಹಧಾರಣೆ ಮಾಡಿಕೊಂಡು ಆಗಾಗ ಅವತರಿಸುತ್ತಾನೆ.

❁ ಭಗವಂತನನ್ನು ಯಾರು ತಾನೆ ಸಂಪೂರ್ಣವಾಗಿ ಅರಿಯಬಲ್ಲರು? ಆತನ ವ್ಯಕ್ತತೆ, ದೊಡ್ಡದೇ ಆಗಲಿ ಚಿಕ್ಕದೇ ಆಗಲಿ, ಯಾವುದನ್ನೂ ಮನುಷ್ಯ ಅರಿಯಲಾರ. ಒಂದು ವಿಷಯ, ಆತನನ್ನು ಸಂಪೂರ್ಣವಾಗಿ ಅರಿಯುವುದರ ಆವಶ್ಯಕತೆ ತಾನೆ ಏನಿದೆ? ಆತನನ್ನು ಪ್ರತ್ಯಕ್ಷಮಾಡಿಕೊಂಡು ಬಿಟ್ಟರೆಯೇ ಕಾರ್ಯ ಮುಗಿದ ಹಾಗೆ. ಆತನ ಅವತಾರದ ದರ್ಶನ ಮಾಡಿತು ಅಂದರೆ ಆತನ ದರ್ಶನ ಮಾಡಿದ ಹಾಗೆ. ಯಾರೇ ಆಗಲಿ, ಗಂಗೆಯ ಬಳಿ ಹೋಗಿ ಅದನ್ನು ಸ್ಪರ್ಶಮಾಡಿ ಬಂದರೆ ಆತ ಹೇಳುತ್ತಾನೆ, ‘ನಾನು ಗಂಗೆಯ ದರ್ಶನ ಸ್ಪರ್ಶನ ಮಾಡಿ ಬಂದೆ’; ಹೀಗೆಂದು ಆತ ಇಡೀ ಗಂಗೆಯನ್ನು—ಹರಿದ್ವಾರದಿಂದ ಹಿಡಿದು ಗಂಗಾಸಾಗರದವರೆಗೆ ಮುಟ್ಟಬೇಕಾಗಿಲ್ಲ.

ಶ್ರೀರಾಮಕೃಷ್ಣ ವಚನವೇದದಿಂದ